ಶ್ರೀ ಕೆ. ಪ್ರಭಾಕರ್.—ಆಡಿಟರ್-ಜನರಲ್‌ರವರು objection ತೆಗೆದುಕೊಳ್ಳುವ ಪ್ರಶ್ನೆ ಬಂದಿದೆಯೆಂದು ಹೇಳಿದರು. ಆದರೆ ಇದು ಹಿಂದಿನ ಪ್ರಸಂಗವಾದ್ದರಿಂದ ಆ objection ಪ್ರಶ್ನೆ ಇಲ್ಲಿ ಬರುವುದಕ್ಕೆ ಅವಕಾಶವಿಲ್ಲ ಅಲ್ಲವೇ?

Sri K. HANUMANTHAIYA.—Because the question was put to me whether it was legal, I placed the position before the House.

Sri K. PUTTASWAMY.—Was not the Government insuring cars at the time when this car met with an accident?

Sri K. HANUMANTHAIYA.—Yes, they were being insured.

Sri K. PUTTASWAMY.—Is it not a fact that due to the negligence of this officer the State was put to this loss?

Sri K. HANUMANTHAIYA.—That is why action has been taken.

Transfer of Officers.

Q.—170. Sri Y. M. CHANDRASEKHARAIAH (Kadur).—

Will the Government be pleased to state:—

(*a*) how long can Government officers be retained without transfer in a place;

(*b*) the steps they have taken in respect of officers that are remaining in the same place for a long time and whether a list of such officers has been prepared;

(*c*) whether officers who remained for a long period in the same place and afterwards were transferred to some other place where they stayed for only a short time and got themselves re-transferred to their old place have been included in that list and action has been taken in their case;

(*d*) whether the rule relating to transfer of officers from Maidan to Malnad and *vice versa* has beenn enforced strictly;

(*e*) the number of officers that have served in Malnad fo rthe prescribed period and have not been transferred to Maidan;

(*f*) whether such persons will be immediately transferred?

A.—Sri K. HANUMANTHAIYA (Chief Minister).—

(*a*) Generally for three years.

(*b*) These are taken as and when necessary in the exigencies of service and it is not considered necessary to maintain any standing list of such officers, as the information can be readily obtained from the Civil List.

(*c*) Does not arise in view of the reply to clause (*b*) above.

(*d*) Yes, to the extent possible subject to such relaxations, if any, as may be found necessary in the exigencies of the Public Service.

(*e*) The date from which the particulars are to be furnished and the categories of officers to which these should relate and the departments in respect of which the information is required may please be specified.

(*f*) Does not arise in view of the reply to clause (*e*).

ಶ್ರೀ ವೈ. ಎಂ. ಚಂದ್ರಶೇಖರಯ್ಯ.—ಅಧಿಕಾರಿಗಳು ಒಂದೇ ಸ್ಥಳದಲ್ಲಿ ಎಷ್ಟು ವರ್ಷ ಇರಬಹುದೆಂದಿದೆಯೆಂದು ಕೇಳಿದ್ದಕ್ಕೆ "ಸುಮಾರು ಮೂರು ವರ್ಷ" ಎಂದು ಹೇಳಿದ್ದೀರಿ. ಸರ್ಕಾರಿ ಆರ್ಡರಿನಲ್ಲಿ ಹೀಗೆಯೇ "ಸುಮಾರು ಮೂರು ವರ್ಷ" ಎಂತಲೇ ಕೊಟ್ಟಿದೆಯೇ?

ಶ್ರೀ ಕೆ. ಹನುಮಂತಯ್ಯ.—ನಿಮ್ಮ ಉದ್ದೇಶ ಏನೆಂದು ಹೇಳಿದರೆ ಸರಿಯಾದ ಉತ್ತರ ಕೊಡಬಹುದು.

ಶ್ರೀ ವೈ. ಎಂ. ಚಂದ್ರಶೇಖರಯ್ಯ. ಸರ್ಕಾರಿ ಹುಕ್ಕುಮಿನಲ್ಲಿ ಎಷ್ಟು ವರ್ಷದೊಳಗೆ ವರ್ಗಮಾಡ ದೇಕೆಂದಿದೆ.

ಶ್ರೀ ಕೆ.ಹನುಮಂತಯ್ಯ.—ಉತ್ತರದಲ್ಲೇ ಕೊಟ್ಟಿದೆ.

ಶ್ರೀ ವೈ. ಎಂ. ಚಂದ್ರಶೇಖರಯ್ಯ.—'ಸುಮಾರು' ಎಂದು ಹೇಳಿದ್ದೀರಲ್ಲ.

ಶ್ರೀ ಕೆ. ಹನುಮಂತಯ್ಯ.—'ಸುಮಾರು' ಎಂದರೆ 15 ದಿವಸ—ಒಂದು ತಿಂಗಳು ಸ್ವಲ್ಪ ಹೆಚ್ಚುಕಡಮೆ ಆಗಬಹುದು ಎಂದು. ಹಾಗಿಲ್ಲದೆ ನಿಖರವಾಗಿ ಲೆಕ್ಕ ಹಾಕಿ 24 ಘಂಟೆಯೊಳಗಾಗಿ ವರ್ಗಮಾಡುವುದಕ್ಕಾಗು ವುದಿಲ್ಲ.

ಶ್ರೀ ವೈ. ಎಂ. ಚಂದ್ರಶೇಖರಯ್ಯ.—ಪ್ರತಿಯೊಬ್ಬ ಅಧಿಕಾರಿಯೂ ಮಲೆನಾಡು ಸರ್ವಿಸ್ ಮಾಡಿಯೇ ಮಾಡಬೇಕೆಂದು ಸರ್ಕಾರಿ ಹುಕ್ಕುಮಿನಲ್ಲಿಲ್ಲವೇ?

ಶ್ರೀ ಕೆ. ಹನುಮಂತಯ್ಯ.—ಇದೆ.

ಶ್ರೀ ವೈ. ಎಂ. ಚಂದ್ರಶೇಖರಯ್ಯ.—ಅದೇ ರೀತಿ ಮೈಸೂರು ದೇಶದಲ್ಲಿ ಬೆಂಗಳೂರಿನವರ್ಗದವರತಕ್ಕ ಎಲ್ಲಾ ಅಧಿಕಾರಿಗಳೂ ಮಲೆನಾಡು ಸರ್ವಿಸ್ ಮಾಡಿ ದ್ದಾರೆಯೇ?

Mr. SPEAKER.—He is particular about (*e*).

ಶ್ರೀ ಪೈ. ಎಂ. ಚಂದ್ರಶೇಖರಯ್ಯ.—ಒಬ್ಬ ನೌಕರ ಒಂದು ಸ್ಥಳದಲ್ಲಿ 3 ವರ್ಷಕ್ಕೆ ಮೇಲ್ಪಟ್ಟಲ್ಲದೆ ಕೆಳಪಟ್ಟು ಇರಬೇಕಾದರೇ ಕೆಲವರನ್ನು ಬಂದ ಸುಮಾರು 2-3 ತಿಂಗಳಿನಲ್ಲಯೇ ಅಲ್ಲಿನ ಅಧಿಕಾರಿಗಳು ಆ ನೌಕರನಿಗೆ ಕಪ್ಪ ಕೊಡುವುದು ತಮ್ಮ ಗಮನಕ್ಕೆ ಬಂದಿದೆಯೆ ?

ಶ್ರೀ ಕಡಿದಾಳ್ ಮಂಜಪ್ಪ.—ಸಾಮಾನ್ಯವಾಗಿ ಗೆಜೆಟೆಡ್ ಆಫೀಸರುಗಳನ್ನು 2½ ವರ್ಷಕ್ಕಿಂತ ಕಮ್ಮಿ ಅವಧಿಯಲ್ಲಿ ವರ್ಗಾಯಿಸಕೂಡದೆಂದು ಸರ್ಕ್ಯುಲರ್ ಇದೆ. ಮತ್ತು 5 ವರ್ಷಕ್ಕೆ ಮೇಲ್ಪಟ್ಟು ಒಂದೇ ಸ್ಥಳದಲ್ಲಿ ಇರಲೇ ಕೂಡದೆಂದೂ ಸರ್ಕಾರಿ ಆರ್ಡರ್ ಇದೆ.

Mr. SPEAKER.—He is concerned with the Overseers of Kadur Taluk. That will be considered.

Depressed Class Officers in Gazetted Cadres.

Q.—192. Sri J. NARAYANAPPA (Chintamani—Scheduled Castes).—

Will the Government be pleased to state:—

(*a*) (i) The number of Amildars,
(ii) the number of Assistant Commissioners, and
(iii) the number of Deputy Commissioners belonging to Depressed Classes in the State;

(*b*) whether a new list has been prepared for the appointment of Amildars;

(*c*) if so, the number of persons belonging to Depressed Classes whose names have been included therein;

(*d*) whether it has come to their notice that there are Depressed Class people in service who are qualified for appointment as Amildars;

(*e*) out of Senior Assistant Commissioners belonging to Depressed Classes, what is the number of whose promotion to the cadre of Deputy Commissioners is under the active consideration of Government?

A.—Sri K. HANUMANTHAIYA (Chief Minister).—

(*a*) (i) 118.
(ii) 121.
(iii) Nil.

(*b*) The list is under the consideration of Government.

(*c*) This does not arise in view of the reply furnished above.

(*d*) This does not arise in view of the reply furnished above.

(*e*) Nil.

ಶ್ರೀ ಜೆ ನಾರಾಯಣಪ್ಪ.—ಅಮಲ್ದಾರಿ ಲಿಸ್ಟ್ ತಯಾರುಮಾಡಬೇಕಾದರೆ ಎಷ್ಟು ಕಾಲಬೇಕು ?

ಶ್ರೀ ಕೆ. ಹನುಮಂತಯ್ಯ.—ಅದು ಸರ್ಕಾರದವರ ಪರ್ಯಾಲೋಚನೆಯಲ್ಲಿದೆಯೆಂದು ಉತ್ತರದಲ್ಲಿ ಹೇಳಿದ್ದೇ ನಲ್ಲ.

ಶ್ರೀ ಟಿ. ಹನುಮಯ್ಯ.—(a)ಗೆ ಕೊಟ್ಟಿರುವ ಉತ್ತರದಲ್ಲಿ 118 ಜನ ಅವರ್ಡರ ಗಳೂ, 121 ಜನ ಅಸಿಸ್ಟೆಂಟ್ ಕಮೀಷನರುಗಳೂ ಇದ್ದಾರೆಂದು ಹೇಳಿದ್ದೀರಿ. ಇವರುಗಳೆಲ್ಲಾ ನಿಮ್ಮ ಪಂಗಡಕ್ಕೆ ಸೇರಿದವರೇ ?

ಶ್ರೀ ಕೆ. ಹನುಮಂತಯ್ಯ.—ಆ ರೀತಿಯಾಗಿ ದೇವರು ಒಂದು ದಿವಸ ಮಾಡಲೆಂದು ನಾನು ಪ್ರಾರ್ಥಿಸುತ್ತೇನೆ.

ಶ್ರೀ ಟಿ. ಹನುಮಯ್ಯ.—ನಿಮ್ಮ ಪಂಗಡಕ್ಕೆ ಸೇರಿದ ಅಮಲ್ದಾರರುಗಳ ಸಂಖ್ಯೆಯೆಷ್ಟು ಎಂದು ಕೇಳಿರುವುದಕ್ಕೆ 118 ಜನ ಎಂದು ಹೇಳಿದ್ದೀರಲ್ಲ.

ಶ್ರೀ ಕೆ. ಹನುಮಂತಯ್ಯ.—ಅವರು ಕೇಳಿರುವುದು ಅಮಲ್ದಾರರ ಸಂಖ್ಯೆ; ನಿಮ್ಮ ಪಂಗಡಕ್ಕೆ ಸೇರಿದ ಅಮಲ್ದಾರರ ಸಂಖ್ಯೆಯಲ್ಲ.

ಶ್ರೀ ಟಿ. ಹನುಮಯ್ಯ.—ಇಲ್ಲಿ ಕೊಟ್ಟಿರುವ ಅಂಕಿ ಸರಿಯಾಗಿದೆಯೇ ಎಂದು ಕೇಳುತ್ತಿದ್ದೇನೆ.

ಅಧ್ಯಕ್ಷರು.—ಸರಿಯಾಗಿದೆ.

ಶ್ರೀ ಜಿ. ದುಗ್ಗಪ್ಪ.—ಕನ್ನಡ ಪ್ರತಿಯಲ್ಲಿ ಕೊಟ್ಟಿರುವ ಪ್ರಶ್ನೆಯಲ್ಲಿ ಸಂಸ್ಥಾನದಲ್ಲಿ ನಿಮ್ಮ ತರಗತಿಗಳಿಗೆ ಸೇರಿದ ಅಮಲ್ದಾರರ ಸಂಖ್ಯೆ ಎಂದು ಹೇಳಿದೆ; ಅದಕ್ಕೆ ಉತ್ತರವಾಗಿ 118 ಎಂದು ಕೊಟ್ಟಿದೆ. ಇದು ಸರಿಯೇ ಎನ್ನುವುದು ಅವರ ಪ್ರಶ್ನೆ.

ಶ್ರೀ ಕೆ. ಹನುಮಂತಯ್ಯ.—ಭಾಷಾಂತರ ಮಾಡಿರುವುದರಲ್ಲಿ ವ್ಯತ್ಯಾಸವಾಗಿರ ಬುದರಿಂದ ಆ ರೀತಿ ಉತ್ತರ ಬಂದಿದೆ.

ಶ್ರೀ ಜಿ. ದುಗ್ಗಪ್ಪ.—ಹಾಗಾದರೆ 118 ಜನರೂ ನಿಮ್ಮ ತರಗತಿಯ ಅಮಲ್ದಾರರುಗಳಲ್ಲದಿದ್ದ ಮೇರೆ ಸರಿಯಾದ ಸಂಖ್ಯೆ ಎಷ್ಟು ?

ಶ್ರೀ ಕೆ. ಹನುಮಂತಯ್ಯ.—ನೋಟೀಸ್ ಬೇಕು.

ಶ್ರೀ ಜಿ. ದುಗ್ಗಪ್ಪ.—I. A. S. ಸೆಲೆಕ್ಷನ್ನಿಗಾಗಿ ನಿಮ್ಮ ತರಗತಿಗಳಿಗೆ ಸೇರಿದ ಎಷ್ಟು ಜನ ಅಸಿಸ್ಟೆಂಟ್ ಕಮೀಷನರನ್ನು ಪಟ್ಟಿಯಲ್ಲಿ ಸೇರಿಸಿ ಮಾಡಲಾಯಿತು ?

ಶ್ರೀ ಕಡಿದಾಳ್ ಮಂಜಪ್ಪ.—ನನಗೆ ನೆನಪಿರುವ ಮಟ್ಟಿಗೆ ಎಲ್ಲ ಡಿಪ್ರೆಸ್ಡ್ ಕ್ಲಾಸಿನ ಅಧಿಕಾರಿಗಳನ್ನೂ interview ಮಾಡಲಾಯಿತು.

ಶ್ರೀ ಜಿ. ದುಗ್ಗಪ್ಪ.—ಕೊನೆಗೆ ಎಷ್ಟು ಜನರನ್ನು ಆ ಪಟ್ಟಿಗೆ ಸೇರಿಸಲಾಯಿತು ?

ಶ್ರೀ ಕಡಿದಾಳ್ ಮಂಜಪ್ಪ.—7 ಎಂದು ಕಾಣುತ್ತದೆ.

ಶ್ರೀ ಎಚ್. ಕೆ. ಸಿದ್ದಯ್ಯ.—ಡೆಪ್ಯುಟಿ ಕಮೀಷನರುಗಳು ಡಿಪ್ರೆಸ್ಡ್ ಕ್ಲಾಸಿಗೆ ಸೇರಿದವರಾಗಿ ಯಾರೂ ಇಲ್ಲ ಎಂದು ಹೇಳಿದ್ದೀರಿ. ಇದುವರೆಗೂ ಏಕೆ ಮಾಡಲಿಲ್ಲ ?

ಶ್ರೀ ಕಡಿದಾಳ್ ಮಂಜಪ್ಪ.—ಸೀನಿಯಾರಿಟಿ, ಕ್ವಾಲಿಫಿಕೇಷನ್ ಮುಂತಾದುವುಗಳನ್ನು ಗಣನೆಗೆ ತೆಗೆದು